ಮೂಲ ದಾವಾ ನಂ. 13/2017

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 01-07-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್. ಜಿ. ಎಚ್. ವಕೀಲರಿಂದಃ**

ನಾನು ಈ ದಾವೆಯನ್ನು ಕುಟುಂಬದ ಪರವಾಗಿ ಹೂಡಿರುತ್ತೇನೆ. ಈ ದಾವೆಯನ್ನು ನನ್ನ ತಂದೆ ತಾಯಿಗೆ ಇದ್ದಂತಹ 6 ಜನ ಮಕ್ಕಳ ಪರವಾಗಿ ಮಾಡಿರುತ್ತೇನೆ. ಈ ದಾವೆ ದಾಖಲಿಸುವಾಗ ದಾವಾ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಹೂಡಿದ್ದೀರಾ ಎಂದರೆ ಸಾಕ್ಷಿ ನಾನು ವಕೀಲರಿಗೆ ಕೇಳಿ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಯಾವ ದಿಕ್ಕಿನಲ್ಲಿ ಮಣ್ಣಿನ ದಿಬ್ಬಗಳು ಇವೆ ಎಂದರೆ ಸಾಕ್ಷಿ ನನಗೆ ದಿಕ್ಕು ಗೊತ್ತಾಗುವುದಿಲ್ಲ ಎಂದು ನುಡಿದು ನಮ್ಮ ಮನೆಯ ಮುಂಭಾಗದಲ್ಲಿ ಮಣ್ಣಿನ ದಿಬ್ಬಗಳಿವೆ ಎಂದು ನುಡಿಯುತ್ತಾರೆ.

ದಾವಾ ಪತ್ರದಲ್ಲಿ ದಾವಾ ಸ್ಥಳದ ಸುತ್ತಲೂ ಎತ್ತರದ ಮಣ್ಣಿನ ದಿಬ್ಬ ಇದೆ ಎಂದು ಬರೆಸಿದ್ದು ಅದು ಸರಿಯಾ ತಪ್ಪಾ ಎಂದರೆ ಸಾಕ್ಷಿ ನಮ್ಮ ಮನೆಯ ಮುಂದೆ ಮಾತ್ರ ಮಣ್ಣಿನ ದಿಬ್ಬ ಇದೆ ಎಂದು ನುಡಿಯತ್ತಾರೆ. ದಾವಾ ಐಟಂ ನಂ. 1 ದಾವಾ ಐಟಂ 2 ರ ಯಾವ ದಿಕ್ಕಿಗೆ ಇದೆ ಎಂದರೆ ಸಾಕ್ಷಿ ಅದು ಎಡಬದಿಗೆ ಇದೆ, ನನಗೆ ದಿಕ್ಕು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ 2 ರ ಪೂರ್ವ ದಿಕ್ಕಿಗೆ ಒಂದು ಹಳ್ಳ ಇದೆ. ಸಾಕ್ಷಿ ಮುಂದುವರಿದು ಅದು ಇನ್ನೂ ವಿಂಗಡಣೆಯಾಗಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.